**ದಿನಾಂಕಃ 28.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿ ವಾದಿ ಪರ ವಕೀಲರಿಂದಃ**

1. ಸದರಿ ದಾವೆಯನ್ನು ಸರೋಜಮ್ಮರವರು ಕೃಷ್ಣ ಇವರ ವಿರುದ್ಧ ಹಾಕಿರುತ್ತಾರೆ. ಸದರಿ ದಾವೆಯನ್ನು ಸರ್ವೆ ನಂ.111/2 ಕ್ಕೆ ಹಾಕಿದ್ದು ಅದರ ವಿಸ್ತೀರ್ಣ 1 ಎಕರೆ 34 ಗುಂಟೆ ಇರುತ್ತದೆ. ಸದರಿ ಜಮೀನು ನನ್ನ ಜಮೀನಿನ ಪಕ್ಕದಲ್ಲಿರುತ್ತದೆ ಎಂದರೆ ಸರಿ. ನನ್ನ ಜಮೀನು ನನಗೆ ಪಡ restoreಆಗಿರುತ್ತದೆಂದರೆ ಸರಿ. ಅದೇ ರೀತಿ ಪ್ರತಿವಾದಿಗೂ ಸಹ ಪಡ restore ಆಗಿರುತ್ತದೆಂದರೆ ಸರಿಯಲ್ಲ. ಸದರಿ ಜಾಗೆಯಲ್ಲಿ ಪ್ರತಿವಾದಿಯು ರೇಷ್ಮೆ ಹಾಗೂ ತೆಂಗು ಹಾಕಿರುತ್ತಾರೆಂದರೆ ಹೌದು ಸಾಕ್ಷಿಯು ಮುಂದುವರಿದು ಅದನ್ನು ಸರೋಜಮ್ಮ ರವರು ಹಾಕಿರುತ್ತಾರೆಂದು ನಂತರ ನುಡಿಯುತ್ತಾರೆ.

2. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನು ಹೇಳಿ ತಯಾರು ಮಾಡಿಸಿರುತ್ತೇನೆ. ನನ್ನ ಜಮೀನಾದ ಸರ್ವೆ ನಂ.325/1 ಇದು ಪೂರ್ವದ ದಿಕ್ಕಿನಲ್ಲಿ ಇರುತ್ತದೆ. ನಾವು ಮತ್ತು ವಾದಿ ಸರೋಜಮ್ಮ ಚೆನ್ನಾಗಿದ್ದೇವೆಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ಅವರ ಜೊತೆ ಬಂದಿರುತ್ತೇವೆಂದರೆ ಸರಿ. ನನಗೂ ಪ್ರತಿವಾದಿಗೂ ಜಗಳ ಇದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ಅಣ್ಣ ತಮ್ಮಂದಿರು ಜಮೀನುಗಳ ವಿಷಯವಾಗಿ ನಮಗೂ ಅವರಿಗೂ ಜಗಳ ಆಗುತ್ತಿರುತ್ತದೆಂದರೆ ಸರಿ. 1940 ರಿಂದ ಪ್ರತಿವಾದಿ ಹಾಗೂ ಅವರ ವಂಶಸ್ಥರೇ ಹಾಗೂ ನಮ್ಮ ಕುಟುಂಬ ಸದರಿ ಸರ್ವೆ ನಂ.111 ರಲ್ಲಿ ಸ್ವಾಧೀನದಲ್ಲಿ ಇರುತ್ತದೆಂದರೆ ಸರಿ. ಪ್ರತಿವಾದಿ ನನ್ನ ದೊಡ್ಡಪ್ಪನ ಮಗ. ನಾವಿಬ್ಬರಿಗೂ ಒಂದೇ ತಾತನವರು ಇರುತ್ತಾರೆಂದರೆ ಸರಿ.

3. ವಾದಿಯಾದ ಸರೋಜಮ್ಮರವರು 2001-02 ರಲ್ಲಿ ಖಾತೆ ಮಾಡಿಸಿಕೊಂಡು ಈ ಸಂಬಂಧ ಒಂದು ದಾವೆ ಹಾಕಿದ್ದು ಅದು ವಜಾ ಆಗಿರುವ ಬಗ್ಗೆ ನನಗೆ ಗೊತ್ತಿರುತ್ತದೆಂದರೆ ಸರಿಯಲ್ಲ. ಸರ್ವೆ ನಂ.106/1 ಇದರಲ್ಲಿ 0.24 ಗುಂಟೆ, 106/2 ರಲ್ಲಿ 1.18 ಗುಂಟೆ, ಸರ್ವೆ ನಂ.106/3 ರಲ್ಲಿ 0.31 ಗುಂಟೆ ಮತ್ತು ಸರ್ವೆ ನಂ.106/4 ರಲ್ಲಿ 1.30 ಗುಂಟೆ

ಮತ್ತು ಸರ್ವೆ ನಂ.111/1 ರಲ್ಲಿ 1.09 ಎಕರೆ ಹಾಗೂ 111/2 ರಲ್ಲಿ 1.31 ಎಕರೆ ಮತ್ತು ಸರ್ವೆ ನಂ.111/3 ರಲ್ಲಿ 0.33 ಗುಂಟೆ ಇವುಗಳಲ್ಲಿ ಪಡ ಜಮೀನು restore ಆಗಿರುತ್ತದೆಂದರೆ ಸರಿ. ಸಾಕ್ಷಿಯು ಮುಂದುವರಿದು ರಾಮೇಗೌಡರೇ ಸದರಿ ಪಡವನ್ನು restore ಮಾಡಿಸಿಕೊಟ್ಟಿರುತ್ತಾರೆಂದು ನುಡಿಯುತ್ತಾರೆ.

4. ಸದರಿ ಜಮೀನಿನಲ್ಲಿ ಪುಟ್ಟೇಗೌಡರೇ ಮುಂಚಿನಿಂದಲೂ ಸ್ವಾಧೀನದಲ್ಲಿ ಇದ್ದಾರೆಂದರೆ ಸಾಕ್ಷಿಯು ನಾವು ಹುಟ್ಟಿದಾಗಿನಿಂದಲೂ ಸರೋಜಮ್ಮರವರೇ ಸ್ವಾಧೀನದಲ್ಲಿದ್ದಾರೆಂದು ನುಡಿಯುತ್ತಾರೆ. ಈ ಸಂಬಂಧ ಯಾವುದೇ ಮಹಜರ್ ಆಗಲೀ ಮತ್ತೆ ಯಾವುದೇ ಸಂಬಂಧ ಕಚೇರಿಯ ವರದಿಯಾಗಲೀ ಇರುವುದಿಲ್ಲ, ಪ್ರತಿವಾದಿ ಹಾಗೂ ಅವರ ತಂದೆಯೇ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ.  ಸಾಕ್ಷಿ ಮುಂದುವರಿದು ನಾನೇ ಪಕ್ಕದ ಜಮೀನಿನವನಾಗಿದ್ದು ನನಗೆ ಗೊತ್ತಿರುತ್ತದೆಂದು ನುಡಿಯುತ್ತಾರೆ. ಸರೋಜಮ್ಮ ರವರು 2003-04 ರ ಪಹಣಿಯಲ್ಲಿ ಡಮ್ಮಿ cultivator ಎಂಬುದಾಗಿ ಬರುತ್ತಿದೆ ಎಂದರೆ ಸಾಕ್ಷಿಯು ರಾಮೇಗೌಡರ ಹೆಸರಿನಲ್ಲಿ ಪಹಣಿ ಇರುತ್ತದೆಂದು ನುಡಿಯುತ್ತಾರೆ. ಪಹಣಿಯಲ್ಲಿ ಡಮ್ಮಿ cultivator ಎಂಬುದಾಗಿ ಬರುತ್ತಿದೆ ಎಂದರೆ ನಾನು ಓದಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪಹಣಿಯಲ್ಲಿ ಪ್ರಸ್ತುತ ಯಾರ ಹೆಸರು ಬರುತ್ತಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ರಾಮು ರವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ.

5. ವಾದಿ ಹಾಗೂ ವಾದಿಯರ ಕುಟುಂಬ ಇವರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಅದು ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ನನ್ನ ಜಮೀನಿಗೂ ಸೇರಿಸಿ ಪ್ರತಿವಾದಿಯ ತಂದೆಯೇ ಪಡ restore ಗಾಗಿ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ಪಡ restore ಆದ ಮೇಲೆ ನನ್ನ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಸದರಿ ಪಡ restore ಆದ ಮೇಲೆ ಪ್ರತಿವಾದಿಯು ಹಣ ಸಂದಾಯ ಮಾಡಿದ ನಂತರ ಅವರ ಹೆಸರಿಗೆ ಪಹಣಿ ಬಂದಿರುತ್ತದೆಂದರೆ ನನಗೆ ಗೊತ್ತಿಲ್ಲ. ಈ ಸಂಬಂಧ ನನಗೆ ಮಾಹಿತಿ ಇದ್ದರೂ ಸಹಿತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪಹಣಿಯಲ್ಲಿ

ಸರೋಜಮ್ಮರವರ ಹೆಸರು ತೆಗೆದು ಕೃಷ್ಣ ರವರ ಹೆಸರು ಬಂದಿರುತ್ತದೆಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಎಸಿ ಹಾಗೂ ಡಿಸಿ ನ್ಯಾಯಾಲಯದಲ್ಲಿ ಬಂದ ಆದೇಶದ ಮೇರೆಗೆ

ಹಾಗೂ ಪಡ **restore** ಆದ ಮೇಲೆ ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ಸಾಕ್ಷಿಯು ನಮಗೆ ಗೊತ್ತಿರುವ ಹಾಗೆ ರಾಮಬೋವಿ ಇವರ ಹೆಸರಿನಲ್ಲಿ ಬರುತ್ತಿದೆ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ .**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**